ಆಯವ್ಯಯದಲ್ಲಿ ಬಳ್ಳಾರಿ ಜಿಲ್ಲೆಯ ಕಂಪ್ಲಿ, ಬೆಳಗಾವಿ ಜಿಲ್ಲೆಯ ಕಾಗವಾಡ, ಧಾರವಾಡ ಜಿಲ್ಲೆಯ ಅಣ್ಣಿಗೇರಿ ಮತ್ತು ಅಳ್ನಾವರ ಹಾಗೂ ದಾವಣಗೆರೆ ಜಿಲ್ಲೆಯ ನ್ಯಾಮತಿ ಇವುಗಳನ್ನು ತಾಲ್ಲೂಕುಗಳನ್ನಾಗಿ ರಚಿಸಲಾಗುವುದೆಂದು ಘೋಷಿಸಲಾಗಿರುತ್ತದೆ.

ಇ) ನೂತನ ತಾಲ್ಲೂಕು ರಚನೆ ಮಾಡಲು ಯಾವುದೇ ನಿರ್ದಿಷ್ಟ ಮಾರ್ಗಸೂಚಿಗಳು ಇರುವುದಿಲ್ಲ. ಆದಾಗ್ಯೂ ತಾಲ್ಲೂಕು ರಚನೆಗೆ ನೇಮಿಸಲಾಗಿದ್ದ ಸಮಿತಿಗಳು/ಆಯೋಗಗಳು ಆ ಪ್ರದೇಶದ ವಿಸ್ತೀರ್ಣ ಮತ್ತು ಜನಸಂಖ್ಯೆ ಹಾಗೂ ಜನಸಂಖ್ಯೆಯಲ್ಲಿನ ವಿವಿಧ ವರ್ಗಗಳ ವಸ್ತುಸ್ಥಿತಿ, ನೀರಾವರಿ, ಯೋಜನೆಗಳ ಪ್ರಗತಿ ಔದ್ಯೋಗಿಕ, ಕೃಷಿ ಕ್ಷೇತ್ರಗಳಲ್ಲಿ ಮುಂದಿನ ದಶಕಗಳಲ್ಲಿ ಆಗಬಹುದಾದ ಬೆಳವಣಿಗೆಗಳನ್ನು ಮತ್ತಿತರ ಅಂಶಗಳನ್ನು ಪರಿಗಣಿಸುವಂತೆ ಶಿಫಾರಸ್ಸು ಮಾಡಿರುತ್ತವೆ.

ಬಾಲ ಕಾರ್ಮಿಕರ ನಿರ್ಬಂಧನೆ

385(678); ಶ್ರೀ ಹ್ಯಾರಿಸ್ ಎನ್.ಎ

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಬಾಲ ಕಾರ್ಮಿಕರನ್ನು ಗುರುತಿಸಿ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮಗಳನ್ನು ಜರುಗಿಸಿದ ಒಟ್ಟು ಪ್ರಕರಣಗಳೆಷ್ಟು;

ಆ) ವಿವಿಧ ಕಾರಣಗಳಿಗಾಗಿ ಉದ್ಯೋಗ ಅರಸಿ ಬರುತ್ತಿರುವ ಮಕ್ಕಳ ಸಂಖ್ಯಾ ಪ್ರಮಾಣದಲ್ಲಿ ಏರಿಳಿತಗಳ ಕುರಿತಾದವಿವರಗಳೇನು; ಉತ್ತರ ಕರ್ನಾಟಕ ಪ್ರದೇಶಗಳಿಂದ ಉದ್ಯೋಗಕ್ಕಾಗಿ ಬರುವ ಕೂಲಿ ಕಾರ್ಮಿಕರೊಂದಿಗೆ ಬರುವ ಮಕ್ಕಳಿಗೆ ಸರ್ಕಾರ ಒದಗಿಸಿಕೊಡುತ್ತಿರುವ ಸೌಲಭ್ಯಗಳೇನು;

ಇ) ಬಾಲ ಕಾರ್ಮಿಕರಿಗೆ ಪುನರ್ ವಸತಿ ಕಲ್ಪಿಸುವ ಮತ್ತು ಅವರಿಗೆ ಅರಿವು ಮೂಡಿಸುವ ಕೆಲಸ ಕಾರ್ಯಗಳಲ್ಲಿ ಸಹಕಾರ ನೀಡುತ್ತಿರುವ ಸರ್ಕಾರೇತರ ಸಂಘ ಸಂಸ್ಥೆಗಳ ಜಿಲ್ಲಾವಾರು ವಿವರಗಳೇನು; ಅವರಿಗೆ ಸರ್ಕಾರ ಒದಗಿಸಿಕೊಡುತ್ತಿರುವ ನೆರವು ಇತ್ಯಾದಿಗಳ ಕುರಿತಾದ ವಿವರಗಳೇನು?

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಕಾರ್ಮಿಕ ರಾಜ್ಯ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ 6681 ಬಾಲಕಾರ್ಮಿಕರನ್ನು ಪತ್ತೆಹಚ್ಚಲಾಗಿದೆ. ಬಾಲಕಾರ್ಮಿಕರನ್ನು ನೇಮಿಸಿಕೊಂಡಿದ್ದ 445 ಮಾಲೀಕರುಗಳ ವಿರುದ್ಧ ಸಕ್ಷಮ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗಿರುತ್ತದೆ. ಸದರಿ ಅವಧಿಯಲ್ಲಿ 130 ಪ್ರಕರಣಗಳಲ್ಲಿ ನ್ಯಾಯಾಲಯಗಳು ಮಾಲೀಕರನ್ನು ಶಿಕ್ಷೆಗೆ ಗುರಿಪಡಿಸಿ ₹ 10,26,390/– ಗಳನ್ನು ದಂಡವಾಗಿ ವಿಧಿಸಿದೆ.

ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ್ವಯ ಅಪಾಯಕಾರಿ ಉದ್ದಿಮೆಗಳಲ್ಲಿ ಬಾಲಕಾರ್ಮಿಕರನ್ನು ನೇಮಿಸಿಕೊಂಡ ಮಾಲೀಕರಿಂದ ಪ್ರತೀ ಬಾಲ ಕಾರ್ಮಿಕನಿಗೆ ₹ 20,000/– ಗಳಂತೆ ಕಳೆದ ಮೂರು ವರ್ಷಗಳಲ್ಲಿ ₹ 13,20,000/– ಗಳನ್ನು ಪರಿಹಾರವಾಗಿ ವಸೂಲು ಮಾಡಲಾಗಿದೆ.

ಬಾಲಕಾರ್ಮಿಕರನ್ನು ನೇಮಿಸಿಕೊಂಡು ಕನಿಷ್ಟ ವೇತನಕ್ಕಿಂತ ಕಡಿಮೆ ವೇತನ ಪಾವತಿ ಮಾಡಿದ ಮಾಲೀಕರಿಂದ ಕಳೆದ ಮೂರು ವರ್ಷಗಳಲ್ಲಿ ₹ 22,21,572/– ಗಳನ್ನು ವಸೂಲು ಮಾಡಿ ಬಾಲ ಕಾರ್ಮಿಕರ ಕುಟುಂಬಗಳಿಗೆ ಪಾವತಿಸಲಾಗಿದೆ.

ಆ) ಉತ್ತರ ಕರ್ನಾಟಕ ಪ್ರದೇಶಗಳಿಂದ ಉದ್ಯೋಗಕ್ಕಾಗಿ ಬರುವ ಇಂತಹ ಕುಟುಂಬದ ಸದಸ್ಯರುಗಳು ಸಾಮಾನ್ಯವಾಗಿ ಕಟ್ಟಡ ನಿರ್ಮಾಣ ಮತ್ತು ಪ್ಲಾಂಟೇಷನ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ. ಕುಟುಂಬದ ಸದಸ್ಯರೊಂದಿಗೆ ಬರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ

ಬಾಲವಾಡಿಗಳನ್ನು ನಡೆಸಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಶಿಕ್ಷಣ ಇಲಾಖೆಯವರು ಟೆಂಟ್ ಶಾಲೆಗಳನ್ನು ನಡೆಸುವುದರ ಮೂಲಕ ವಿದ್ಯಾಭ್ಯಾಸವನ್ನು ನೀಡುತ್ತಿದ್ದಾರೆ. ಮಧ್ಯಕ್ಕೆ ವಿದ್ಯಾಭ್ಯಾಸವನ್ನು ಬಿಟ್ಟು ಕುಟುಂಬದ ಸದಸ್ಯರೊಂದಿಗೆ ಬರುವ ಮಕ್ಕಳನ್ನು ಶಾಲೆ ಬಿಟ್ಟ ಮಕ್ಕಳೆಂದು ಪರಿಗಣಿಸಿ ರಾಜ್ಯ ಮತ್ತು ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯಡಿಯಲ್ಲಿ ನಡೆಯುತ್ತಿರುವ ವಸತಿ ಶಾಲೆಗಳಲ್ಲಿ ಪುನರ್ವಸತಿಯನ್ನು ಕಲ್ಪಿಸಿ ಶಿಕ್ಷಣವನ್ನು ನೀಡಲಾಗುತ್ತಿದೆ.

ಇ) ರಾಜ್ಯದ 30 ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಡಿಸ್ಟ್ರಿಕ್ಟ್ ಚೈಲ್ಡ್ ಲೇಬರ್ ಪ್ರಾಜೆಕ್ಟ್ ಸೊಸೈಟಿ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದು, ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಬಾಲಕಾರ್ಮಿಕರ ಪುನರ್ವಸತಿ ಕಾರ್ಯಗಳು ನಡೆಯುತ್ತಿರುತ್ತವೆ. ಪತ್ತೆಹಚ್ಚಲಾದ ಬಾಲಕಾರ್ಮಿಕರಿಗೆ ಪುನರ್ವಸತಿಯನ್ನು ಕಲ್ಪಿಸುವ ಉದ್ದೇಶದಿಂದ ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ವಿಶೇಷ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ವಿಶೇಷ ವಸತಿ ಶಾಲೆಗಳಲ್ಲಿ ಪುನರ್ವಸತಿಗೊಂಡ ಮಕ್ಕಳಿಗೆ ಇಂದಿನ ಕಲಿಕೆ ಮಟ್ಟಕ್ಕನುಗುಣವಾಗಿ ವಿದ್ಯಾಭ್ಯಾಸವನ್ನು ನೀಡಲಾಗುತ್ತಿದೆ. ವಸತಿ ಶಾಲೆಗಳಲ್ಲಿ ಉಚಿತ ಊಟ, ಸಮವಸ್ತ್ರ, ಆರೋಗ್ಯ ತಪಾಸಣೆ, ಮನೋರಂಜನೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ. ವಿಶೇಷ ವಸತಿ ಶಾಲೆಗಳಿಗೆ ತಗಲುವ ಪೂರ್ತಿ ಖರ್ಚನ್ನು ಸರ್ಕಾರ ಭರಿಸುತ್ತಿದೆ.

ಬಾಲಕಾರ್ಮಿಕರ ನೇಮಕಾತಿ ವಿರುದ್ಧ ಜನಜಾಗೃತಿ ಕಾರ್ಯಕ್ರಮಗಳನ್ನು ಸಹ ನಡೆಸುತ್ತಿದ್ದು, ಸರ್ಕಾರೇತರ ಸಂಸ್ಥೆಗಳ ಸಹಕಾರವನ್ನು ಸಹ ಪಡೆದುಕೊಳ್ಳಲಾಗುತ್ತಿದೆ. ಜನಜಾಗೃತಿ ಕಾರ್ಯಕ್ರಮಗಳ ಸಂಪೂರ್ಣ ಖರ್ಚನ್ನು ಸರ್ಕಾರವೇ ಭರಿಸುತ್ತಿದೆ.

ಮಕ್ಕಳ ಪುನರ್ವಸತಿ ಮತ್ತು ಜನಜಾಗೃತಿ ಕಾರ್ಯಕ್ರಮಗಳಲ್ಲಿ ಆಸಕ್ತಿ ತೋರಿಸಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರೇತರ ಸಂಸ್ಥೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ–ಅ ರಲ್ಲಿ ಒದಗಿಸಿದೆ,

ಅನುಬಂಧ–ಅ

(ಸರ್ಕಾರೇತರ ಸಂಸ್ಥೆಗಳ ಜಿಲ್ಲಾವಾರು ವಿವರಗಳು)

ಯಾದಗಿರಿ ಜಿಲ್ಲೆ:

1. ಡಾನ್ ಬಾಸ್ಕೋ ಸಮಾಜ ಕೇಂದ್ರ, ಯಾದಗಿರಿ.
2. ಜೈ ಸಂತೋಷಿಮಾತಾ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಡೋರ್ನಹಳ್ಳಿ ಗ್ರಾಮ, ಶಹಾಪುರ ತಾಲ್ಲೂಕು
3. ಮರಹಬಾ ಅರೇಬಿಕ್ ಎಜುಕೇಷನ್ ಸೊಸೈಟಿ, ಸುರಪುರ ತಾಲ್ಲೂಕು

ದಾವಣಗೆರೆ ಜಿಲ್ಲೆ:

1. ಸ್ಫೂರ್ತಿ ಸಂಸ್ಥೆ, ಹಳೆ ಆರ್ ಟಿ ಓ ಕಛೇರಿ, 'ಡೂಡಾ' ಹತ್ತಿರ, ದಾವಣಗೆರೆ
2. ಬೆಳಕು ಸಂಸ್ಥೆ, ತೋಲ್ಹುಣ್ಸಿ ರಸ್ತೆ, ದಾವಣಗೆರೆ
3. ಟಿಕೆಹೆಚ್ ಸಂಸ್ಥೆ, ಜೆಕೆಆರ್ ಬಡಾವಣೆ, 2ನೇ ಕ್ರಾಸ್, ಹರಿಹರ
4. ನೇಸರ ಸಂಸ್ಥೆ, ಐವಿ ಸರ್ಕಲ್, ಹರಪನಹಳ್ಳಿ
5. ದುರ್ಗಾಶಕ್ತಿ ಸಂಸ್ಥೆ, ಕೆಹೆಚ್ಬಿ ಕೊಟ್ಟೂರ್, ಹರಿಹಪುರ

ರಾಮನಗರ ಜಿಲ್ಲೆ:

1. ಡಾನ್ ಬಾಸ್ಕೋ, ಡಾನ್ ಬಾಸ್ಕೋ, ಎನ್.ಎ.ಎಸ್ ಸರ್ಕಲ್, ತಿರುಮಲ ರಸ್ತೆ, ಅಜ್ಜನಗಲ್ಲಿ, ಮಾಗಡಿ, ರಾಮನಗರ
2. ಶ್ರೀ ಹರಿರಎಜ್ಯೂಕೇಷನ್ & ವೆಲ್ಫೆರ್ಟ್ರಸ್ಟ್, ಶ್ರೀ ಹರಿರಎಜ್ಯೂಕೇಷನ್ & ವೆಲ್ಫೆರ್ಟ್ರಸ್ಟ್, ಟಿಪ್ಪುನಗರ, ಮೊಹಲ್ ಬಿಸ್ಮಿಲ್ಲಾ ಸರ್ಕಲ್, 3ನೇ ಕ್ರಾಸ್, ರಾಮನಗರ.

3. ಶ್ರೀ ಮಲ್ಲೇಶ್ವರ ಸೇವಾ ಸಮಿತಿ, ಶ್ರೀ ಮಲ್ಲೇಶ್ವರ ಸೇವಾ ಸಮಿತಿ, ಯರಬನಗರ, ರಾಮನಗರ

ಮೈಸೂರು ಜಿಲ್ಲೆ:

1. ಸಹಾರಾ ಬಾಲ ಕಾರ್ಮಿಕರ ಪುನರ್ವಸತಿ ಶಾಲೆ (ಎನ್.ಸಿ.ಎಲ್.ಪಿ), ಅಜೀಜ್ ಸೇಠ್, ಡಬ್ಬಲ್‌ರಸ್ತೆಕ್ರಾಸ್, ನಿಮ್ರಾ ಮಜಿದ್‌ರಸ್ತೆ, ಶಾಂತಿನಗರ, ಮೈಸೂರು–570019.
2. ಶ್ರೀ ಕಂಠೇಶ್ವರ ಬಾಲ ಕಾರ್ಮಿಕರ ಪುನರ್ವಸತಿ ಶಾಲೆ (ಎನ್.ಸಿ.ಎಲ್.ಪಿ) & (ಎಸ್.ಸಿ.ಎಲ್.ಪಿ), ಕೆ.ಎನ್.ಪುರ, ಕ್ಯಾತಮಾರನಹಳ್ಳಿ, ಮೈಸೂರು–570019.
3. ನಿಸರ್ಗಬಾಲ ಕಾರ್ಮಿಕರ ಪುನರ್ವಸತಿ ಶಾಲೆ (ಎನ್.ಸಿ.ಎಲ್.ಪಿ), ಸೋಮೇಶ್ವರ ಟೆಂಪಲ್ ಸ್ಟ್ರೀಟ್, 1ನೇ ಮನೇ ರಸ್ತೆ, ಹೆಚ್.ಡಿ.ಕೋಟೆ, ಮೈಸೂರು–571114.
4. ಡೀಡ್‌ಬಾಲ ಕಾರ್ಮಿಕರ ಪುನರ್ವಸತಿ ಶಾಲೆ (ಎಸ್.ಸಿ.ಎಲ್.ಪಿ), ಹೆಚ್.ಡಿ.ಕೋಟೆ ರಸ್ತೆ, ಚಿಕ್ಕಹುಣಸೂರು, ಹುಣಸೂರು ತಾಲ್ಲೂಕು, ಮೈಸೂರು–570105.

ಮಂಡ್ಯ ಜಿಲ್ಲೆ:

1. ವಿಕಸನ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮರಿಗೌಡ ಲೇಔಟ್, ಮಂಡ್ಯ.
2. ಜ್ಞಾನ ವಿಕಾಸ ಎಜ್ಯುಕೇಷನ್ ಟ್ರಸ್ಟ್, ಚೀನಕುರುಲಿ, ಪಾಂಡವಪುರ ತಾಲ್ಲೂಕು.
3. ಮೈತ್ರಿ ಗ್ರಾಮೀಣಾಭಿವೃದ್ಧಿ ಸಂಸ್ಥೆ, 12ನೇ ಕ್ರಾಸ್, ವಿ.ವಿ. ನಗರ, ಮಂಡ್ಯ.
4. ಶ್ರೀ ಮಹಾಲಿಂಗೆಶ್ವರ ವಿದ್ಯಾ ಸಂಸ್ಥೆ, ಗಂಜಿಗೆರೆ, ಕೆ.ಆರ್.ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ.
5. ಜ್ಞಾನೋದಯ ಸೇವಾ ಟ್ರಸ್ಟ್, ಕಲ್ಲಹಳ್ಳಿ, ಮಂಡ್ಯ.

ಹಾವೇರಿ ಜಿಲ್ಲೆ:

1. ಸಂಜೀವಿನಿ ಸಮಗ್ರ ಅಭಿವೃದ್ಧಿ ಸಂಸ್ಥೆ (ರಿ) ಹಾವೇರಿ, ಸಂಜೀವಿನಿ ಬಾಲಕಾರ್ಮಿಕ ವಿಶೇಷ ವಸತಿ ಶಾಲೆ, ಚನ್ನಬಸಪ್ಪಾ ಬಿಲ್ಡಿಂಗ್ ದೇವಿಹೊಸೂರ ಕ್ರಾಸ್, ಹಾವೇರಿ
2. ವಿನಯ ರೂರಲ್ ಡೆವಲಪ್‌ಮೆಂಟ್ ಸೊಸೈಟಿ, (ರಿ) ರಾಣೇಬೆನ್ನೂರ್, ವಿನಯ್ ಬಾಲಕಾರ್ಮಿಕ ವಿಶೇಷ ವಸತಿ ಶಾಲೆ, ವಿನಾಯಕ ನಗರ 3ನೇ ಕ್ರಾಸ್, ಪೂರ್ವಬಡಾವಣೆ ಶಾಲೆಹತ್ತಿರ ರಾಣೇಬೆನ್ನೂರು,
3. ನವೋದಯ ಶಿಕ್ಷಣ ಮತ್ತು ಪರಿಸರ ಅಭಿವೃದ್ಧಿ ಸೇವಾ ಸಂಸ್ಥೆ(ರಿ). (ನೀಡ್ಸ್) ರಾಣೇಬೆನ್ನೂರ
4. ಇರಾಡ್ಸ ಸಂಸ್ಥೆ (ರಿ). ಅಕ್ಕಿ ಆಲೂರ ಹಾನಗಲ್
5. ಶ್ರೀ ಸಿದ್ಧಲಿಂಗೇಶ್ವರ ವಿದ್ಯಾ ಪೀಠ (ರಿ) ಕಬ್ಬಿಣ ಕಂಥಿಮಠ ಕೋಟೆ. ರಟ್ಟಿಹಳ್ಳಿ, ಹಿರೇಕರರೂರ
6. ಗಾಯತ್ರಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ) ಹಾವೇರಿ, ಕನಸು ಬಾಲಕಾರ್ಮಿಕ ವಿಶೇಷ ವಸತಿ ಶಾಲೆ, ತಹಶೀಲ್ದಾರ ಕಛೇರಿ ಹತ್ತಿರ, ಸವಣೂರು.
7. ಅರುಣೋದಯ ಶಿಕ್ಷಣ ಆರೋಗ್ಯ ಮತ್ತು ಕೃಷಿ ಅಭಿವೃದ್ಧಿ ಸ್ವಯಂ ಸಂಸ್ಥೆ (ರಿ) ರಾಹುತನಕಟ್ಟಿ ತಾ: ರಾಣೇಬೆನ್ನೂರ
8. ಶ್ರೇಯಸ್ (ಸೌಭಾಗ್ಯಲಕ್ಷ್ಮಿ ಹೆಲ್ತ್, ರೂರಲ್ ಎಜುಕೇಷನ್ ಯೂತ್ ಅವೇರ್‌ನೆಸ್ ಡೆವಲಪ್‌ಮೆಂಟ್ ಸೊಸೈಟಿ) ಸಂಸ್ಥೆ (ರಿ), ಹಾವೇರಿ

ಗುಲಬರ್ಗಾ ಜಿಲ್ಲೆ:

1. ವಿಶ್ವ ಸೇವಾ ಮಿಷನ್, ಪ್ಲಾಟ ನಂ 131, ಸ್ವಾಮಿ ವಿವೇಕಾನಂದ ನಗರ ಮಾಳವಾಡಿ,
2. ಆಲ್–ಫಾತೀಮಾ ಸಂಸ್ಥೆ, ಸಲಿಂ ಪಾಷಾ ಮುಲ್ಲಾ ಮ.ನಂ 1–949–61–1–53 ತಾರಫೈಲ್, ಹುದಾ ಮಜೀದ ಅಂಬಿಕಾ ನಗರ, ಗುಲಬರ್ಗಾ
3. ದೇವಜಿನಾಯಕ ಶಿಕ್ಷಣ ಸಂಸ್ಥೆ, ತಿಪ್ಪಣ್ಣಾಯಲ್ಲಪ್ಪಾ ಪತಳೆ ಮ.ನಂ–102 ಹರಿಜನ ವಾಡಾ,
4. ಆಲ್–ಫರ್ಹಾ ಮಹಿಳಾ ಮಂಡಳ, ಮ.ನಂ–175, ಗುಡುಸಾಬ ಮೊಹಲ್ಲಾ, ಜಾಮೀಯಾ ಮಸೀದ ಎದುರುಗಡೆ, ಕಮಲಾಪೂರ
5. ಕಿರಣರೂರಲ್‌ರಿಕನ್ಸ್‌ಟ್ರಕ್ಷನ್ ಸೊಸೈಟಿ
6. ವಿಶ್ವ ಭಾರತಿ ವರ್ಡ್ಸ್
7. ಡಾ॥ ನೆಲ್ಸನ್ ಮಂಡೇಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ
8. ಹಿಡಾ ಸಂಸ್ಥೆ

ಬೆಳಗಾವಿ ಜಿಲ್ಲೆ:

1. ಪ್ರಜ್ವಲ್ ಸಂಸ್ಥೆ, ಎಸ್.ಎಸ್.ಕೆ ಸಮಾಜ, ಶ್ರೀ ಕಾಟವಾ ಬಿಲ್ಡಿಂಗ್, ಅಂಬಾಬಾಯಿ ದೇವಸ್ಥಾನ ಎದುರುಗಡೆ, ಖಡೇ ಬಜಾರ್, ಬೆಳಗಾವಿ

ಚಾಮರಾಜನಗರ ಜಿಲ್ಲೆ:

1. ಆದಿವಾಸಿ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, ಚಾಮರಾಜನಗರ
2. ಮೂಬಲಿಟಿ ಇಂಡಿಯಾ, ಚಾಮರಾಜನಗರ
3. ಹೂಲಿಕ್ರಾಸ್ ಸಂಸ್ಥೆ, ಹನೂರು ಕೊಳ್ಳೆಗಾಲ

ರಾಯಚೂರು ಜಿಲ್ಲೆ:

1. ಸಗರನಾಡು ಬಾಲಕಾರ್ಮಿಕರ ಪುನರ್ ವಸತಿ ತರಬೇತಿ ಕೇಂದ್ರ, ಯರಮರಸ್ ಕ್ಯಾಂಪ್, ರಾಯಚೂರು
2. ನಿಸರ್ಗ ಬಾಲಕಾರ್ಮಿಕರ ಪುನರ್‌ವಸತಿ ತರಬೇತಿ ಕೇಂದ್ರ, ಹೌಸಿಂಗ್ ಬೋರ್ಡ್, ಯರಮರಸ್ ಕ್ಯಾಂಪ್, ಪೋತಗಲ್‌ರಸ್ತೆ, ರಾಯಚೂರು
3. ಶ್ರೀಮತಿ ಕಮಲಾನೆಹರೂ ಬಾಲಕಾರ್ಮಿಕ ಪುನರ್ ವಸತಿ ತರಬೇತಿ ಕೇಂದ್ರ, ವಿಶ್ವನಾಥ ಕಾಲೋನಿ, ರಾಯಚೂರು
4. ಜಿ.ಭೀಮಣ್ಣ ಬಾಲಕಾರ್ಮಿಕ ಪುನರ್ ವಸತಿ ತರಬೇತಿ ಕೇಂದ್ರ, ಮಾವಿನಕೆರೆ ಹತ್ತಿರ, ರಾಯಚೂರು.
5. ಡಾ॥ ಎ.ಪಿ.ಜೆಅಬ್ದುಲ್ ಕಲಾಂ ಬಾಲಕಾರ್ಮಿಕ ಪುನರ್ ವಸತಿ ತರಬೇತಿ ಕೇಂದ್ರ, ಮಾನವಿ ಮುಖ್ಯ ರಸ್ತೆ ಕಸ್ಬೆಕ್ಯಾಂಪ್, ತಾ:ಜಿ:ರಾಯಚೂರು.
6. ಪ್ರಕೃತಿ ಬಾಲಕಾರ್ಮಿಕ ಪುನರ್‌ವಸತಿ ತರಬೇತಿ ಕೇಂದ್ರ, ಗಿಲ್ಲೆಸೂಗೂರುಕ್ಯಾಂಪ್ ತಾ:ಜಿ:ರಾಯಚೂರು
7. ಸಿಂಧು ಬಾಲಕಾರ್ಮಿಕ ಪುನರ್ ವಸತಿ ತರಬೇತಿ ಕೇಂದ್ರ, ಯರಗೇರಾ ಮುಖ್ಯರಸ್ತೆ, ಯರಗೇರಾ, ತಾ:ಜಿ:ರಾಯಚೂರು.
8. ಚಿಪಿಲಿಪಿ ಬಾಲಕಾರ್ಮಿಕ ಪುನರ್ ವಸತಿ ತರಬೇತಿ ಕೇಂದ್ರ, ಕೆಂಚಮ್ಮಗುಡಿ ಹತ್ತಿರ ಪೋತ್ನಾಳ ತಾ:ಮಾನ್ವಿ ಜಿ:ರಾಯಚೂರು.
9. ಸುಪ್ರಭಾ ಬಾಲಕಾರ್ಮಿಕ ಪುನರ್ ವಸತಿ ತರಬೇತಿ ಕೇಂದ್ರ, ಬಸವಲಿಂಗಪ್ಪ ಕಾಲೋನಿ, ದೇವದುರ್ಗಕ್ರಾಸ್, ಸಿರವಾರ ತಾ:ಮಾನ್ವಿ
10. ಸಂಜೀವಿನಿ ಬಾಲಕಾರ್ಮಿಕ ಪುನರ್ ವಸತಿ ತರಬೇತಿ ಕೇಂದ್ರ, ಕುರ್ಡಿತಾ:ಮಾನ್ವಿ ಜಿ:ರಾಯಚೂರು
11. ಪ್ರಗತಿ ಬಾಲಕಾರ್ಮಿಕ ಪುನರ್ ವಸತಿ ತರಬೇತಿ ಕೇಂದ್ರ, ಬಾಷಮಿಯಾಕಾಲೇಜ್ ಹತ್ತಿರ ಸಿಂಧನೂರು ರಸ್ತೆ, ಮಾನ್ವಿ ಜಿ:ರಾಯಚೂರು.

ಕೋಲಾರ ಜಿಲ್ಲೆ:

1. ಸರಸ್ವತಿ ಮಹಿಳಾ ಮಂಡಳಿ, ಬ್ರಾಹ್ಮಿನ್ ಸ್ಟ್ರೀಟ್, ಹಳೇ ಚಾಮಯ್ಯ ಚೌಲ್ಟ್ರಿ, ಕೋಲಾರ.
2. ಮಾರುತಿ ಎಜ್ಯೂಕೇಷನಲ್ ಸೋಸೈಟಿ, ಬಾಲಾಜಿ ಟಾಕೀಸ್‌ರಸ್ತೆ, 2ನೇ ಕ್ರಾಸ್, ಮಾಲೂರು.
3. ಪರಿವರ್ತನಾ ವಿವಿದೋದ್ದೇಶ ಸಮಾಜ ಸೇವಾ ಸಂಸ್ಥೆ, ರೇಲ್ವೆ ಫೀಡರ್‌ರಸ್ತೆ, ಮಾಲೂರು.
4. ಶ್ರೀ ಜಯಚಾಮರಾಜೇಂದ್ರ ವಿದ್ಯಾ: ಮಂದಿರ, ಮುತ್ಯಾಲ್ ಪೇಟೆ, ಮುಳಬಾಗಿಲು.
5. ದಿವ್ಯಜ್ಯೋತಿ ಎಜ್ಯೂಕೇಷನಲ್ & ಕಲ್ಚರಲ್ ಸೋಸೈಟಿ, ಅರಿಕುಂಟೆ, ಶ್ರೀನಿವಾಸಪುರ.
6. ಅಕ್ಷಯ ಎಜ್ಯೂಕೇಷನಲ್ & ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್, ಬಾನಹಳ್ಳಿ, ಬಂಗಾರಪೇಟೆ ಟೌನ್.

ಬಳ್ಳಾರಿ ಜಿಲ್ಲೆ:

1. ನವಜೀವನ ಸಂಸ್ಥೆ, ಬಳ್ಳಾರಿ, ಓಪಿಡಿ ಹತ್ತಿರ, ವಿದ್ಯಾ ನಗರ, ಬಳ್ಳಾರಿ.
2. ಚೈತನ್ಯ ರೂರಲ್ ಎಜ್ಯುಕೇಷನ್ ಡೆವಲಪ್‌ಮೆಂಟ್ ಸೊಸೈಟಿ, ಸಂಡೂರು ತಾಲ್ಲೂಕು.
3. ವಿನಾಯಕ ಮಲ್ಟಿಪಲ್ ಆಬ್‌ಜೆಕ್ಟೀವ್ ಸೊಸೈಟಿ, ಹೊಸಪೇಟೆ ತಾಲ್ಲೂಕು.
4. ಡಾನ್ ಬೋಸ್ಕೊ, ಹೊಸಪೇಟೆ ತಾಲ್ಲೂಕು, ಜಂಬುನಾಥ್ ರಸ್ತೆ, ಹೊಸಪೇಟೆ ತಾಲ್ಲೂಕು

5. ಕಾರ್ಮಲ್ ಜ್ಯೋತಿ ಚಾರಿಟೆಬಲ್ ಟ್ರಸ್ಟ್, ಹೂವಿನಹಡಗಲಿ ತಾಲ್ಲೂಕು ಮುದೆನೂರ ರಸ್ತೆ, ತುಂಗಾಭದ್ರಾ ಕಾಲನಿ, ಹೂವಿನಹಡಗಲಿ ತಾಲ್ಲೂಕು.

6. ಶೋಭೋದಯ ರೂರಲ್ ಡೆವಲಪ್‌ಮೆಂಟ್ ಸೇವಾ ಸಂಸ್ಥೆ, ಕೂಡ್ಲಿಗಿ ತಾಲ್ಲೂಕು, ಚಿದಂಬರೇಶ್ವರ ಬಡಾವಣೆ, 2ನೇ ವಾರ್ಡ್, ಸಂಡೂರು ರಸ್ತೆ, ಕೂಡ್ಲಿಗಿ ತಾಲ್ಲೂಕು.

7. ಕರ್ನಾಟಕ ಸೇವಾ ಸಂಘ, ಸಂಡೂರು ತಾಲ್ಲೂಕು ಸ್ಮಿಯರ್ ಪಾಲಿಟೆಕ್ನಿಕ್ ಕಾಲೇಜ್ ಕಂಪೌಂಡ್, ಯಶವಂತನಗರ, ಸಂಡೂರು ತಾಲ್ಲೂಕು.

8. ದಲಿತ ಮಹಾ ಸಭಾ, ಬಳ್ಳಾರಿ ತಾಲ್ಲೂಕು, ಬೆಳಗಳ ರಸ್ತೆ, ಗೌತಮ್ ನಗರ, ಬಳ್ಳಾರಿ ತಾಲ್ಲೂಕು.

ಚಿಕ್ಕಬಳ್ಳಾಪುರ ಜಿಲ್ಲೆ:

1. ನ್ಯೂ ಲೈಫ್ ಮಿನಿಸ್ಟ್ರೀಸ್ ಇನ್ ಇಂಡಿಯಾ ಟ್ರಸ್ಟ್, ಕೆ.ವಿ.ಕ್ಯಾಂಪಸ್ ಹತ್ತಿರ, ಸ್ಟೇನ್ ಗಾರ್ಡನ್, ಚಿಕ್ಕಬಳ್ಳಾಪುರ.

2. ಇಂಟಿಗ್ರೇಟೆಡ್ ವೆಲ್‌ಫೆರ್ ಫೌಂಡೇಶನ್, ಹೆಚ್.ಎಂ.ಎಸ್ ಕಾಂಪ್ಲೇಕ್ಸ್, ಫೋರ್ಟ್, ಶಿಡ್ಲಘಟ್ಟ

ಶಿವಮೊಗ್ಗ ಜಿಲ್ಲೆ:

1. ನಿರ್ಮಲಾ ಬಾಲ ಕಾರ್ಮಿಕರ ವಿಶೇಷ ವಸತಿ ಶಾಲೆ, ಎಂ.ಐ ಕಾನ್ವೆಂಟ್, ಬಿ.ಹೆಚ್.ರಸ್ತೆ, ಶಿವಮೊಗ್ಗ ತಾಲ್ಲೂಕು

ಧಾರವಾಡ ಜಿಲ್ಲೆ:

1. ಶಾಂತಿ ಪ್ರಗತಿ, ಆರ್.ಸಿ. ಕಾಲೊನಿ, ಗದಗರೋಡ, ಹುಬ್ಬಳ್ಳಿ, ಆಶಾಕಿರಣ ಬಾಲಕಾರ್ಮಿಕ ವಿಶೇಷ ವಸತಿ ಶಾಲೆ ಪ್ಲಾಟ್ ನಂ# 3ಸಿ/23, ಆರ್.ಸಿ. ಕಾಲೊನಿ, ಗದಗರೋಡ, ಹುಬ್ಬಳ್ಳಿ–580020
2. ಕಫಾರ್ಡ್ಸ್, ಪಿಂಜಾರಗಲ್ಲಿ, ಯರಗುಪ್ಪಿ, ಆಶಾಕಿರಣ ಬಾಲಕಾರ್ಮಿಕ ವಿಶೇಷ ವಸತಿ ಶಾಲೆ ಬುಡಗಜಂಗಮ ಕಾಲೋನಿ, ತಿಮ್ಮಸಾಗರ ರಸ್ತೆ ಕ್ರಾಸ, ನೇಕಾರ ನಗರ, ಹಳೆ ಹುಬ್ಬಳ್ಳಿ

ಬೀದರ್ ಜಿಲ್ಲೆ:

1. ಡಾನ್ ಬಾಸ್ಕೋ ವಸತಿಯುತ ಬಾಲ ಕಾರ್ಮಿಕ ಶಾಲೆ, ಚಿಕ್ಕಪೇಟೆ, ಬೀದರ
2. ಮರಿಯಆಶ್ರಮ ಬಾಲ ಸದನ ಬಾಲಕಾರ್ಮಿಕ ವಸತಿಯುತ ಶಾಲೆ, ಜಲಸಂಗಿ, ಹುಮ್ನಾಬಾದ್
3. ಸಹಯೋಗ ಬಾಲಕಾರ್ಮಿಕ ಸೇತುಬಂಧ ಶಾಲೆ, ಕೆಹೆಚ್ಬಿ ಕಾಲೊನಿ, ಬಸವಕಲ್ಯಾಣ
4. ಜ್ಞಾನೋದಯ ಬಾಲಕಾರ್ಮಿಕ ವಸತಿಯುತ ಶಾಲೆ, ಅಂಬೇಡ್ಕರ್ ಸರ್ಕಲ್ ಹತ್ತಿರ, ಹುಮ್ನಾಬಾದ್

ಚಿತ್ರದುರ್ಗ ಜಿಲ್ಲೆ:

1. ಚಿತ್ರ ಡಾನ್ ಬಾಸ್ಕೋ ವಸತಿಯುತ ಶಾಲೆ, ಚಿತ್ರದುರ್ಗ
2. ಬಸವೇಶ್ವರ ವಿದ್ಯಾಸಂಸ್ಥೆಯ ವಿಶೇಷ ವಸತಿಯುತ ಶಾಲೆ
3. ಸಹನಾ ಬಾಲಕಾರ್ಮಿಕ ವಸತಿಯುತ ಶಾಲೆ, ಮೊಳಕಾಲ್ಮೂರು

ಉಡುಪಿ ಜಿಲ್ಲೆ:

1. ಸ್ಫೂರ್ತಿಧಾಮ ವಿಶೇಷ ವಸತಿಯುತ ಶಾಲೆ, ಬೇಳೂರು, ಕುಂದಾಪುರತಾಲ್ಲೂಕು

ಗದಗ ಜಿಲ್ಲೆ:

1. ಸ್ವಯಂ ಉದ್ಯೋಗ ತರಬೇತಿ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಿದ್ದಲಿಂಗ ನಗರ, ಗದಗ
2. ಸಮೂಹ ಸಮುದಾಯ ಸೇವಾ ಸಂಸ್ಥೆ(ರಿ) ಸಿದ್ದಲಿಂಗ ನಗರ, ಗದಗ
3. ನವಜ್ಯೋತಿ ವಿವಿದೋದ್ದೇಶಗಳ ಸೇವಾ ಸಂಸ್ಥೆ(ರಿ) ಮಂಜುನಾಥಗುಡಿ ಹತ್ತಿರ, ಬೆಟಗೇರಿ, ಗದಗ
4. ಸೃಷ್ಟಿ ನಗರ ಮತ್ತು ಗ್ರಾಮೀಣಾಭಿವೃದ್ಧಿ ಸೇವಾ ಸಂಸ್ಥೆ(ರಿ) ಲಕ್ಷ್ಮೇಶ್ವರ ತಾ: ಶಿರಹಟ್ಟಿ ಜಿ:ಗದಗ
5. ಮುಕ್ತಾ ಫೌಂಡೇಶನ್ (ರಿ) ಸಾಧು ಅಜ್ಜನಗುಡಿ ಹತ್ತಿರ, ನರಗುಂದ

ಬೆಂಗಳೂರು ಗ್ರಾಮಾಂತರ ಜಿಲ್ಲೆ:

1. ಸಂದೀಪ್ ಸೇವಾ ನಿಲಯಂ, ಬೆನಕ ಲೇಔಟ್, ನೆಲಮಂಗಲ
2. ಪ್ರಭಂಜನ ಎಜುಕೇಷನ್ ಟ್ರಸ್ಟ್, ವಿಜಯಪುರ ಟೌನ್, ದೇವನಹಳ್ಳಿ ತಾಲೂಕು
3. ನಂದಾದೀಪ ಎಜುಕೇಷನ್ ಅಂಡ್ ರಿಹ್ಯಾಬಿಲಿಟೇಷನ್ ಸೊಸೈಟಿ ಫಾರ್ ಡಿಸೇಬಲ್ಡ್, ಕಜುಮೊಹೊಳ್ಳ, ಹೊಸಕೋಟೆ ಟೌನ್
4. ನಂದಾದೀಪ ಎಜುಕೇಷನ್ ಅಂಡ್ ರಿಹ್ಯಾಬಿಲಿಟೇಷನ್ ಸೊಸೈಟಿ, ಫಾರ್‌ಡಿಸೇಬಲ್ಡ್, ಬೈಲನರಸಾಪುರ, ಹೊಸಕೋಟೆ ತಾಲೂಕು
5. ಜೀವನ ರೂರಲ್ ಡೆವೆಲಪ್ಮೆಂಟ್ ಸೊಸೈಟಿ, ದಾಡಿಘಟ್ಟ ಮಾಡಗು ವಿಲೇಜ್, ಮುತ್ತಸಂದ್ರ, ದೊಡ್ಡಬಳ್ಳಾಪುರ

6. ಆದಿತ್ಯಾನಂದ ರೂರಲ್ & ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ ಸೊಸೈಟಿ, ಕಂಬಳಿಪುರ ಹೋಬಳಿ, ಹೊಸಕೋಟೆ ತಾಲೂಕು

7. ಸಾಯಿ ಗೋಕುಲ ಸೇವಾ ಸಂಸ್ಥೆ, ನಂದಗುಡಿ, ಹೊಸಕೋಟೆ ತಾಲೂಕು.

8. ಮದರ್‌ಟೆರೆಸಾ ಸೇವ ಟ್ರಸ್ಟ್, ಬೈಚಪುರರಸ್ತೆ, ದೇವನಹಳ್ಳಿ.

9. ಸಿದ್ದೇಶ್ವರ ರೂರಲ್ ಡೆವಲಪ್‌ಮೆಂಟ್ ಸೋಸೈಟಿ, ತ್ಯಾಮಗೊಂಡ್ಲು, ನೆಲಮಂಗಲ

10. ಕಾಳಿಕಾಂಬಾ ಎಜ್ಯೂಕೇಷನ್ ಸೋಸೈಟಿ (ರಿ) ಬೂದಿಗೆರೆ, ದೇವನಹಳ್ಳಿ ತಾಲೂಕು

11. ಸಿದ್ಧಾರ್ಥ ಸೇವಾ ಟ್ರಸ್ಟ್, ದೇವನಹಳ್ಳಿ ಟೌನ್.

12. ಜನಜಾಗ್ರತಿ ಸೇವಾ ಕೇಂದ್ರ, ಗುಟ್ಟಹಳ್ಳಿ, ಹೊಸಕೋಟೆ.

ಬೆಂಗಳೂರು ನಗರ ಜಿಲ್ಲೆ:

1. ಟ್ರಸ್ಟ್ ಫಾರ್ ರೂರಲ್ ಡೆವಲಪ್‌ಮೆಂಟ್ ಸ್ಟ್ರೇಟಜೀಸ್ (ಐ) ನಂ.6, ಇ–1, ಶ್ರೀ ಕೃಷ್ಣ ಮಂದಿರ, 25ನೇ ಕ್ರಾಸ್, 3ನೇ ಸಿ ಮೇನ್ ರಸ್ತೆ, ಹುಳಿಮಾವು, ಬೆಂಗಳೂರು–76.

2. ಟಿಪ್ಪು ಎಜ್ಯೂಕೇಷನ್ ಸೊಸೈಟಿ, ಚಾಮರಾಜಪೇಟೆ, ಮೈಸೂರು ರಸ್ತೆ, ಬೆಂಗಳೂರು–18.

3. ಪರಸ್ಪರ ಟ್ರಸ್ಟ್, ಯಶವಂತಪುರ, ಬೆಂಗಳೂರು–560022.

4. ರಜಾ ಎಜ್ಯೂಕೇಷನ್ & ಸೋಷಿಯಲ್ ವೆಲ್‌ಫೆರ್ ಸೋಸೈಟಿ, ಬಿಸ್ಮಿಲ್ಲಾನಗರ, ಬೆಂಗಳೂರು–560029.

5. ಐ.ಪಿ.ಡಿ.ಪಿ–1, ನಂದಿನಿ ಲೇಔಟ್, ಬೆಂಗಳೂರು–560096

6. ಆಪ್ಸಾ, ನಮ್ಮನೆ ನಂ.34, ವಿಮಾನಪುರ ಪೋಸ್ಟ್, ಬೆಂಗಳೂರು–560017.

7. ಇಕೋ, ಕಮ್ಮನಹಳ್ಳಿ, ಥಾಮಸ್ ಟೌನ್ ಪೋಸ್ಟ್, ಬೆಂಗಳೂರು–560084.

8. ಗಾಂಧಿಜಿ ಎಜ್ಯೂಕೇಷನ್ ಟ್ರಸ್ಟ್, ಆನೇಕಲ್, ಬೆಂಗಳೂರು–562106.

9. ಯಂಗ್ ಮೇನ್ಸ್ ಕ್ರಿಶ್ಚಿಯನ್ ಅಸೋಸಿಯೇಷನ್, ನೃಪತುಂಗ ರಸ್ತೆ, ಬೆಂಗಳೂರು–560001.

10. ಆದರ್ಶ ರೂರಲ್ ಡೆವಲಪ್‌ಮೆಂಟ್ ಸೋಸೈಟಿ, ಟಿ.ದಾಸರಹಳ್ಳಿ, ಬೆಂಗಳೂರು–560057.

1. ಜೈ ಭಾರತಮಾತಾ ಮಹಿಳಾ ಮಂಡಳಿ, ಆನೇಕಲ್, ಬೆಂಗಳೂರು–562106.

12. ಆಕ್ಷನ್ ಡೆವಲಪ್‌ಮೆಂಟ್ ಟ್ರಸ್ಟ್, ಸರ್ಜಾಪುರ ರಸ್ತೆ, ಬೆಂಗಳೂರು–560035.

13. ಸತ್ಯಂ ಶಿವಂ ಸುಂದರಂ, ಯಲಹಂಕ ಹೋಬಳಿ, ಬೆಂಗಳೂರು–560064

14. ಕಾಳಿಕಾಂಬಾ ವಿದ್ಯಾ ಸಂಸ್ಥೆ, ಹೊಸಕೋಟೆ, ಬೆಂಗಳೂರು ಗ್ರಾಮಾಂತರ–562114.

15. ಸುರಭಿ ಫೌಂಡೇಶನ್ ಟ್ರಸ್ಟ್, ಕನಕಪುರ ಮೇನ್ ರಸ್ತೆ, ಬೆಂಗಳೂರು–560062.

16. ಶ್ರೀದೇವಿ ಮಹಿಳಾ ಸಂಘ, ಟಿ.ದಾಸರಹಳ್ಳಿ, ಬೆಂಗಳೂರು–560057.

17. ಆಶ್ರಿತಾ ಸೇವಾ ಸಂಸ್ಥೆ, ಹೊಸೂರು ಮೇನ್ ರಸ್ತೆ, ಬೆಂಗಳೂರು–560068.

18. ಅರುಣೋದಯ ಚೈತನ್ಯ ಟ್ರಸ್ಟ್, ಎಸ್‌ಆರ್‌ಕೆ ನಗರ ಪೋಸ್ಟ್, ಬೆಂಗಳೂರು–560077.

19. ಸ್ಪರ್ಶ ಟ್ರಸ್ಟ್, ಮತ್ತಿಕೆರೆ ಮೇನ್ ರಸ್ತೆ, ಬೆಂಗಳೂರು–560054.

ಉತ್ತರ ಕನ್ನಡ ಜಿಲ್ಲೆ – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
ಕೊಡಗು ಜಿಲ್ಲೆ – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
ಹಾಸನ ಜಿಲ್ಲೆ – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
ಕೊಪ್ಪಳ ಜಿಲ್ಲೆ – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
ತುಮಕೂರು ಜಿಲ್ಲೆ – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
ಚಿಕ್ಕಮಗಳೂರು ಜಿಲ್ಲೆ – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
ಬಿಜಾಪುರ ಜಿಲ್ಲೆ – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
ಬಾಗಲಕೋಟೆ ಜಿಲ್ಲೆ – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ
ದಕ್ಷಿಣ ಕನ್ನಡ ಜಿಲ್ಲೆ – ಪ್ರಸ್ತುತ ಯಾವುದೇ ಶಾಲೆಗಳು ನಡೆಯುತ್ತಿಲ್ಲ

ಆದಾಯ ಜಾತಿ ಪ್ರಮಾಣ ಪತ್ರ ನೀಡಿಕೆ

386 (679); ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಅ) ರಾಜ್ಯದಲ್ಲಿ ವಿದ್ಯಾರ್ಥಿಗಳು, ಉದ್ಯೋಗಾರ್ಥಿಗಳಿಗೆ ಆದಾಯ, ಜಾತಿ ಪ್ರಮಾಣ ಪತ್ರ ನೀಡುವ ಕುರಿತಾದ ಚಾಲನೆಯಲ್ಲಿರುವ ವ್ಯವಸ್ಥೆಯ ವಿವರಗಳೇನು;

ಆ) ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ಶಾಲೆಗಳಿಗೆ ಪ್ರಮಾಣ ಪತ್ರವನ್ನು ನೀಡುವ ವ್ಯವಸ್ಥೆಯ ಕುರಿತಾಗಿ ಕೈಗೊಂಡ ಕ್ರಮಗಳೇನು;

ಇ) ಜಾತಿ ಪ್ರಮಾಣ ಪತ್ರ ನೀಡಿಕೆಗೆ ಅನುಸರಿಸುವ ಮಾನದಂಡಗಳು ಮತ್ತು ಒದಗಿಸಿಕೊಡಬೇಕಾದ ದಾಖಲೆಗಳು ಯಾವುವು; ಶಾಲಾ ಮಕ್ಕಳು ತಮ್ಮ ಜಾತಿಯನ್ನು ಶಾಲಾ ದಾಖಲೆಯಲ್ಲಿ ನಮೂದಿಸುವ ಕುರಿತು ಅನುಸರಿಸುತ್ತಿರುವ ಕ್ರಮಗಳೇನು?